— ಪಾರದ ಸಂಚಿಕೆ —

Reg No. M 1299 (Founded 1917) Daily & Weekly

ಸತ್ಯವಾದಿ

SATYAVADI

(ಅಥಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟುದು)

ಸಂಪುಟ 28 ಸಂಚಿಕೆ 179] ಸೋಮವಾರ 9—4—45 [6 ಪೈ

ಹಾಲಿನ ಅಭಾವ ತಪ್ಪುವುದೇ ?

ಬ್ರಿಟನ್ನಿನ ಕೇಂಬ್ರಿಡ್ಜಿನಲ್ಲಿ ಪರಿಶೋಧನೆಯಿಂದ ಒಂದು ತರಹ ಹಸೆಲನ್ನು ತಯಾರಿಸಿರುವೆವು. ಇದನ್ನು ಆಕಳಿಗೆ ಇಂಜಕ್ಷನ್ ಮಾಡಿದರೆ ಆವಳ-ಜನಳಿ ಕರುಗಳಾಗುವುವು ಇದರಿಂದ ಹಾಲಿನ ಅಭಾವ ತಪ್ಪುವುದಲ್ಲವೇ ?

ಮತ್ತೊಬ್ಬರು ಕಂಡುಹಿಡಿದಿರುವ ಪ್ರಯೋಗದಿಂದ ಕರುವಿಲ್ಲದೇ ಹಾಲನ್ನು ಕರೆಯಬಹುದು. ಗಬ್ಬವಾಗಬೇಕಾದದ್ದೂ ಸಹ ಇಲ್ಲ. ಇಂಜಕ್ಷನ್ ಕೊಡುವುದೇ ತಡ, ಹಾಲನ್ನು ಮಾರನೇ ದಿನದಿಂದ ಕರೆಯಬಹುದು. ಹೀಗೆ ಇಂಜಕ್ಷನ್ ಮಾಡಿದ ಒಂದು ಹಸುವಿನಿಂದ ವರ್ಷಕ್ಕೆ 1000 ಗ್ಯಾಲನ್ ಹಾಲು ಉತ್ಪತ್ತಿಯಾಯಿತು.

ಂ ಂ

ಜಪಾನ್ ಪತ್ರಿಕೆಗಳಲ್ಲಿ ಪ್ರಕಟನೆ

ಪ್ರತಿ ತಿಂಗಳ 8 ನೇ ತಾರೀಖಿನ ದಿವಸ ಜಪಾನಿನ ಎಲ್ಲಾ ವೃತ್ತಪತ್ರಿಕೆಗಳೂ ಈ ರೀತಿ ಮುಖಪತ್ರದಲ್ಲಿ ಛಾಪಿಸಬೇಕು.—

" ಅನೇಕ ವರ್ಷಗಳಿಂದ ತಡೆಯಿಲ್ಲದೆ ರಾಜ್ಯಭಾರ ಮಾಡುತ್ತಿರುವ ಜಪಾನ್ ಚಕ್ರವರ್ತಿಗಳಾದ ನಾವು, ನಮ್ಮಲ್ಲಿ ರಾಜಭಕ್ತಿಯುಳ್ಳ ಪ್ರಜೆಗಳಿಗೆ—

ನಾವು ಯುದ್ಧ ಹೂಡಿರುವೆವು.

ಪೂರ್ವ ಏಷ್ಯಾ ಮತ್ತು ಪ್ರಪಂಚದ ಶಾಂತಿ ಕಾಪಾಡಲು ನಾವು ನಮ್ಮ ದೇಹ ತ್ಯಾಗಮಾಡಿರುತ್ತೇವೆ.

ವಿಧಿಯಿಲ್ಲದೆ, ಮನಸ್ಸಿಲ್ಲದೆ ನಮ್ಮ ರಾಜ್ಯವು ಅಮೇರಿಕ, ಬ್ರಿಟ್ ಮೇಲೆ ಕತ್ತಿಕಟ್ಟಬೇಕಾಗಿದೆ.

ಸಹನೆಯಿಂದ ಕಾದೆವು ಬಹಳ ಕಾಲ ತಡೆದೆವು, ಪ್ರಯೋಜನವಾಗಲಿಲ್ಲ. ನಮ್ಮ ಚಕ್ರಾಧಿಪತ್ಯ ಉಳಿಯುವುದೇ ಕಷ್ಟವಾಯಿತು. ನಮ್ಮ ಶಕ್ತಿಯನ್ನೆಲ್ಲಾ ಕೂಡಿಸಿ, ಶತ್ರುವನ್ನು ವಿರೋಧಿಸಬೇಕು.

ಂ ಂ

ಅಷ್ಟು ಬೆಕ್ಕು ಬೇಡ !

ಕಿಂಗ್‌ಸ್ಟನ್ನಿನಲ್ಲಿ ಒಬ್ಬನು 19 ಬೆಕ್ಕುಗಳನ್ನು ಸಾಕುತ್ತಿದ್ದನು. ಸರ್ಕಾರದವರು 17 ಬೆಕ್ಕನ್ನು ಇತರರಿಗೆ ಮಾರಬೇಕೆಂದು ಆಜ್ಞಾಪಿಸಿದರು,

ಂ ಂ

ರೂ. ೧೫ ಸಾವಿರ

' ವೀರ ಶುನಲ್ ' ಸಿನಿಮಾ ಬರೆದ ತಿಪ್ಪೋರ ಸಾಹುವಿಗೆ 15 ಸಾವಿರ ರೂ. ಕೊಡಲಾಯಿತು.

ಮಿತ್ರರು ಹಿಟ್ಲರಿನ ಕತ್ತನ್ನು ಹಿಸಿಕುತ್ತಿರುವುದು

ಗ್ರೀನ್ವಿಚ್ ಗಡಿಯಾರ

ಗ್ರೀನ್ವಿಚ್‌ನಲ್ಲಿ ಹೊಸ ಗಡಿಯಾರಗಳನ್ನು ಕಂಡುಹಿಡಿದಿರುತ್ತಾರೆ. ಅವುಗಳಲ್ಲಿ ಸೆಕೆಂಡಿನಲ್ಲಿ ಸಾವಿರದಲ್ಲಿ ಒಂದು ಭಾಗದ ಕಾಲವನ್ನು ಕೂಡ ತಪ್ಪಿಲ್ಲದೆ ಕಾಣಬಹುದಾಗಿದೆ. ವಿಶ್ವದಲ್ಲಿ ಈ ಬಗೆಯ ಗಡಿಯಾರವನ್ನು ಕಂಡುಹಿಡಿದಿರುವುದು ಇಲ್ಲಿಯೇ.

ಒಂದು ಲಕ್ಷ ಇಲಿಗಳು

ಪಶುವೈದ್ಯಶಾಲೆಗಳ ಉಪಯೋಗಕ್ಕಾಗಿ ದಕ್ಷಿಣ ಆಫ್ರಿಕಾದಲ್ಲಿ ಒಂದು ಲಕ್ಷ ಬಿಳಿ ಇಲಿಗಳನ್ನು ಉತ್ಪತ್ತಿಮಾಡಿ ಅದರಿಂದ ದಡಕನ್ನು (ವ್ಯಾಕ್ಸೀನ್) ತಯಾರ್ಮಾಡಿದರು.

ಹಸುವಿಗೆ ಪೆನಿಸಿಲಿನ್

ಅಮೇರಿಕಾದಲ್ಲಿ ಒಂದು ಹಸುವಿಗೆ ಪೆನ್ಸಿಲಿಯಿನ್ ಕೊಟ್ಟು ನ್ಯೂಮೋನಿಯಾ ಕಾಯಿಲೆಯನ್ನು ವಾಸಿ ಮಾಡಿದರು. ಈ ಔಷಧಿ ಹಸುವಿಗೆ ಕೊಟ್ಟಿದ್ದು ಇದೇ ಮೊದಲು.

ನಾಯಿಗಳ ಹೊಟ್ಟೆಗಾಯಿತು

ಅಮೇರಿಕಾದಲ್ಲಿ ಲೋಹಗಳಿಗೆ ಅಭಾವವಾದುದರಿಂದ ಮೋಟಾರುಕಾರುಗಳ ನಂಬರ್ ಪ್ಲೇಟನ್ನು ಸೋಯಾಬೀಜಗಳಿಂದ ತಯಾರ್ಮಾಡುವರು. ನಾಯಿಗಳು ಈ ಪ್ಲೇಟುಗಳನ್ನು ತಿನ್ನುವುವಂತೆ. ನಾಯಿಗಳಿಗೆ ಬಿಸ್ಕತ್ ಅಭಾವವೇ ಕಾರಣವಂತೆ.

ಸ್ಟಾಲಿನ್ ಹಿಂದೂಗಳಿಗೆ ದನದ ಮಾಂಸ ತಿನ್ನಿಸುತ್ತಿದ್ದನೇ ?

ಬೆವರ್ಲಿ ನಿಕಲಸ್‌ನವನ ' ವರ್ಡಿಕ್ಟ್ ಆಫ್ ಇಂಡಿಯಾ ' ಮರ್ಯಾದೆಗೆಟ್ಟ ಪುಸ್ತಕ. ಭಾರತದ ಆತಿಥ್ಯ ಪಡೆದು, ಈಗತಾನೇ ಕಂಗೆಡುತ್ತಾ ಬಂದ್ಮಲೇ ಅಲಾರಿಕ್ ಜಾಕಬ್ ರವರು ಇದೇ ತರಹ ಮತ್ತೊಂದು ನಾಚಿಕೆಯಿಲ್ಲದ ಪುಸ್ತಕವನ್ನು ಲಂಡನ್ ಕಾಲಿನ್ಸ್ ಕಂಪನಿಯಿಂದ ಪ್ರಕಟಿಸಿರುತ್ತಾರೆ. ಅದರಲ್ಲಿ ಗಾಂಧೀಜಿಯವರು ಆಗಾಖಾರ್ ಅರಮನೆಯಲ್ಲಿ ಉಪವಾಸ ಮಾಡಿದ್ದು ಒಂದು ತಕ್ಕ್ಯ, ಅವರು ಹಣ್ಣಿನ ರಸ ತೆಗೆದು ಕೊಳ್ಳುತ್ತಿದ್ದರ. ಗಾಂಧೀಜಿಯವರ ಸಾವು ರಾಜಕೀಯವಾಗಬೇಕಾಗಿತ್ತೆಂದು ಬರೆದಿರುವರು ! ಪುಸ್ತಕದಲ್ಲಿ ಬ್ರಿಟಿಷರು ' ಸತಿ ' ನಿಲ್ಲಿಸಿದರು, ಭಾರತೀಯರ ಜಾತಿ ವಿಷಯದಲ್ಲಿ ಕೈಹಾಕಲಿಲ್ಲ. ಬ್ರಿಟಿಷರ ಸ್ಥಾನದಲ್ಲಿ ರಷ್ಯನ್ನರಿದ್ದರೆ, ಜಾತಿ ವಿಷಯದಲ್ಲಿ ಕೈಹಾಕುತ್ತಿದ್ದರು, ಆಧುನಿಕ ರೀತಿ ರಾಜ್ಯ ಮಾಡಬೇಕೆಂದು ? ಭಾರತದಲ್ಲಿ 50 ಲಕ್ಷ ಭಿಕ್ಷ ಸನ್ಯಾಸಿ ಬೇಡುವವರಿರುತ್ತಾರೆ. ಇವರ ಕೈಯಿಂದ ಸ್ಟಾಲಿನ್ ಕೆಲಸ ಮಾಡಿಸುತ್ತಿದ್ದನು. ಭಾರತದಲ್ಲಿ ದನಕರುಗಳು ಹೇರಳವಾಗಿವೆ. ತಿನ್ನಲಿಕ್ಕೆ ಮೇವಿಲ್ಲ, ಹಾಲು ಕರೆಯುವುದು ಕಮ್ಮಿ : ಮತವೆಂದು ಇದನ್ನು ಕೊಂದು ತಿನ್ನಲು ಬಿಡುವುದಿಲ್ಲ. ದನದ ಗೊಬ್ಬರವನ್ನು ಮನೆಯನ್ನು ಸಾರಿಸಲು ಉಪಯೋಗಿಸುವರು. ಗೊಬ್ಬರವಾಗಿ ಭೂಮಿಗೆ ಹಾಕುವುದಿಲ್ಲ. ಸ್ಟಾಲಿನ್ನಾಗಿದ್ದರೆ ಹಿಂನೂಗಳು ದನವನ್ನು ತಿನ್ನುವಂತೆ ಮಾಡುತ್ತಿದ್ದನು.

ಏಷ್ಯಾದಲ್ಲಿ ಬೀದಿ ಬೀದಿಗಳಲ್ಲೇ ಹೊಡೆದಾಟವಾಗುತ್ತಿದೆ.

ಬ್ರಿಟಿಷ್ ಸೈನ್ಯವು ಹ್ಯಾನೇವರಿಗೆ 20 ಮೈಲಿ ಹತ್ತಿರ ಬಂದಿದೆ.

ಅಟ್ಲಾಂಟಿಕ್‌ನಲ್ಲಿ ಯು-ಬೋಟ್ ಹಾವಳಿ ತಪ್ಪಿಲ್ಲ.

ಜಪಾನರು ಶರಣಾಗತರಾಗುವುದು ಹೆಚ್ಚು ಸಂಭವವೆಂದು ಸರ್. ಕ್ರಿಗರ ಅಭಿಮತ

ಭಾರತ ಸರ್ಕಾರವು ಬ್ರಿಟಿಷ ಸರ್ಕಾರದ ಸೇವಕರು ಎಂದು ಕೇಂದ್ರ ಸಭೆಯಲ್ಲಿ ಸದ್ಯರುಗಳು ಹೇಳಿದಾಗ ಎಲ್ಲರೂ ನಕ್ಕರು.

ಮುಸ್ಲಿಂ ಲೀಗಿಗೆ ಲಂಡನ್ನಿನಲ್ಲಿ ಒಂದು ಬ್ರಾಂಚು ಸ್ಥಾಪಿಸಲಾಗಿದೆ.

ಮುಸಲೋನಿ ಸ್ವಿಡ್ಜರ್ಲಿಂಡನ್ನು ಆಶ್ರಯ ಕೇಳಿಲ್ಲವೆಂದು ಹೇಳಿರುಸಸು.

ಟಾಂಗೂಪಿನ ಸುತ್ತಮುತ್ತ ಜಪಾನಿಯರು ಪ್ರತಿಘಟಿಸುತ್ತಿರುವರು.

ಈ ವಾರದ ಭವಿಷ್ಯ

(ಓಂ ಜೋತಿಷ್ಯರಿಂದ)

ಮೇಷ — ನಿಮ್ಮ ವೃತ್ತಿ ವ್ಯಾಪಾರಗಳಲ್ಲಿ ಅನುಕೂಲ ಪರಿಸ್ಥಿತಿಗಳು ನಿರ್ಮಾಣವಾಗುವುವು. ಶತ್ರು ವಿಜಯದಿಂದ ಆನಂದ ಪ್ರಾಪ್ತಿ. ಸಮಾಜದಲ್ಲಿ ಗೌರವ. ವ್ಯಾಪಾರದಲ್ಲಿ ಲಾಭವುಂಟು. ಬಂಧು ಸಮಾಗಮವುಂಟು.

ವೃಷಭ — ಮನಸ್ಥಿರತೆ ಇರುವುದಿಲ್ಲವಾಗಲಿ ಬಾಕಿ ವಿಷಯಗಳಲ್ಲಿ ಯಾವ ಲೋಪ ದೋಷಗಳೂ ಇರುವುದಿಲ್ಲ. ಕೋರ್ಟು ವ್ಯವಹಾರಗಳು ಸಫಲಿಸುತ್ತವೆ. ಆರೋಗ್ಯ ವಿಷಯದಲ್ಲಿ ಹುಷಾರಾಗಿರಿ.

ಮಿಥುನ — ಬಂಧುಗಳಿಂದ ಸ್ವಲ್ಪ ತೊಂದರೆಯುಂಟಾಗಬಹುದು. ಉದ್ಯೋಗ ನಾಕರಿಗರಲ್ಲಿಯೂ ಸ್ವಲ್ಪ ಕಷ್ಟವುಂಟು. ಆದರೆ ವಿಶ್ರಾಂತಿಯಿಂದ ಕಾಲವು ಕಳೆದು ಹೋಗುವುದು.

ಕರ್ಕಾಟಕ — ನಿಮ್ಮ ಸ್ಥಿತಿಗಳು ಏರುಪೇರಾಗಿರುತ್ತವೆ. ಲಾಭಕ್ಕೆ ಪ್ರತಿಯಾಗಿ ನಷ್ಟವಾಗಬಹುದು. ಆಸನ ಸರಿಯಾಗಬಹುದು. ಊಟವು ಸುಖವಿಲ್ಲದಿರಬಹುದು.

ಸಿಂಹ — ಪರಿಸ್ಥಿತಿಗಳು ಸ್ವಲ್ಪ ಸುಮುಖವಾಗಿರುತ್ತದೆ. ವ್ಯವಹಾರದಲ್ಲಿ ಅಂತಃಪುರವನ್ನು ಕಟ್ಟುವುದರಲ್ಲಿ ಕಾಲ ಕಳೆಯಬೇಡಿ. ಸಮಾಜ ವ್ಯವಹಾರಗಳಲ್ಲಿ ಸ್ವಲ್ಪ ಅಸಮಾಧಾನವಾಗಬಹುದು.

ಕನ್ಯ — ಆರೋಗ್ಯದ ವಿಷಯದಲ್ಲಿ ಜಾಗ್ರತೆಯಿಂದಿರಿ. ಗೌರವವಿಹೀನ ರೊಂದಿಗೆ ವಾದಿಸಬೇಡಿ.

ತುಲಾ — ಶತ್ರು ವ್ಯೂಹವನ್ನು ಭೇದಿಸಲು ನಿಮಿಗೆ ಇದು ಸರಿಯಾದ ಕಾಲ. ಗೌರವಾಧಿಕ್ಯತೆ, ಆನಂದ, ವಿಜಯ, ಧನಲಾಭ ಇವುಗಳಿಂದ ಸಂತೋಷ ಚಿತ್ತರಾಗುವಿರಿ.

ವೃಶ್ಚಿಕ — ನಿಮ್ಮನ್ನು ನಂಬಿದವರಿಗೆ ಸ್ವಲ್ಪ ಆಶಾಭಂಗವಾಗುವ ಸಂಭವ ವಿದೆ ಸ್ನೇಯರೊಂದಿಗೆ ವಿವಾದವನ್ನಿಟ್ಟುಕೊಳ್ಳಬೇಡಿ ಆರ್ಥಿಕ ಲಾಭವುಂಟು.

ಧನಸ್ಸು — ವೃತ್ತಿ ಉದ್ಯೋಗಗಳಲ್ಲಿ ವಿಶ್ರಾಂತಿಯಿರುವುದಿಲ್ಲ. ಅದುದರಿಂದ ಬೇಸರವಾಗುವುದು ಇತರರಿಗೆ ಲಾಭವಾಗುವುದಾಗಲಿ, ನಿಮಗಿಲ್ಲ. ಅಂತರಾತ್ಮನ ಪ್ರೇರಣೆಯಂತೆ ಕಾರ್ಯಗಳಲ್ಲಿ ವರ್ತಿಸಿ.

ಕಳೆದವಾರ ವಾರ್ತಾತರಂಗ

ರಷ್ಯನರೇ ಆಗಲಿ ಮಿತ್ರರೇ ಆಗಲಿ ಯಾರು ಬರುವರೆಂದು ಗಮನಿಸದೆ. ಬರ್ಮಿನ್ ಪ್ರಜೆಗಳು ಬಿಳೀ ಜಾವ್ಯರ ತಜೂರು ಮಾಡಿಕೊಳ್ಳುತ್ತಿರುವರು.

ಬರ್ಮಾ— ಮಿತ್ರ ಸೇನೆ ಟಾಂಗು ಗುಡ್ಡ ವಶಪಡಿಸಿಕೊಂಡರು.

ಬೆಂಗಳೂರಿನ ಅಶೋರಾ ಕಛೇರಿಯಲ್ಲಿ 'ಫೆಡರೇಷ್ಟ್ ಶಾಖೆಯೊಂದು ಸ್ಥಾಪಿಸಲಾಗಿದೆ ಡಾ | ಎಂ. ರತ್ನ ಸ್ವಾಮಿಯವರು ಇದರ ಅಡ್ವೈಸರ್.

ಜರ್ಮನ್ ಸರ್ಕಾರ ಸ್ವಿಸ್ ಗಡಿಗೆ ಬಂದಿಲ್ಲವೆಂದೂ, ಬರ್ಲಿನ್ನಲ್ಲೇ ಇದೆಯೆಂದೂ ಜರ್ಮನ್ ವಾರ್ತೆ.

ಪರ್ಷಿಯಾದಲ್ಲಿ ಪೆಟ್ರೋಲ್ ಸಿಗುವುದು ದುರದೃಷ್ಟವೆನ್ನಬಹುದು. ತ್ರಿಮೂರ್ತಿಗಳು ತಾವು ಒಬ್ಬರೊಬ್ಬರೇ ಅಎಣ್ಣೆಯ ಒಡೆಯರಾಗಬೇಕೆಂದು ಇಚ್ಛಿಸುತ್ತಿರುವರು.

ಅಮೇರಿಕಾದ ಹೆಂಗಸೊಬ್ಬಳು ಅದೃಶ್ಯ ಗಾಜನ್ನು ಕಂಡುಹಿಡಿದಿರುವಳು. ಇದನ್ನು ಸಬ್‌ಮೆರಿನ್ ಪೆರಿಸ್‌ಕೋಪಿನಲ್ಲಿ ಉಪಯೋಗಿಸಿದರೆ ಬಹಳ ದೂರದ ವರೆಗೂ ನಡೆಯುವ ಚಲನವನ್ನು ನೋಡಬಹುದು. ಇದಕ್ಕಾಗಿ ಈಕೆಗೆ ಅಲ್ಲಿನ ವಿಶ್ವವಿದ್ಯಾನಿಲಯದವರು 2500 ಡಾಲರ್ ಬಹುಮಾನ ಕೊಟ್ಟರು.

ಬ್ರಿಟನ್ನಿನಲ್ಲಿ ಈಗಿರುವಷ್ಟು ಕಲ್ಲಿದ್ದಲು ಅಭಾವ ಮತ್ತೆಂದೂ ಕಾಲದಲ್ಲೂ ಇರಲಿಲ್ಲವೆಂದು ಗೊತ್ತಾಗಿದೆ.

ಮಕರ — ನೀವು ಕೈಗೊಂಡ ಕಾರ್ಯಗಳು ನೆರವೇರುವುದು ಕಷ್ಟ. ಆರೋಗ್ಯವು ಸರಿಯಾಗಿರುವುದಿಲ್ಲ. ಸೆರೆ ಹೊರೆಯಪಟ್ಟೊಂದಿಗೆ ಕಲಹದ ಭಯವುಂಟು.

ಕುಂಭ — ಶ್ರಮಪಟ್ಟರೆ ಕಾರ್ಯ ಲಾಭವಾಗುತ್ತದೆ. ಸಾಲಗಾರರು ಕಷ್ಟ ಕೊಡಬಹುದು. ಆರ್ಥಿಕವಾಗಿ ನಷ್ಟವುಂಟು.

ಮೀನ — ಏನು ಅಡಚಣೆ ಬಂದರೂ ಒಳ್ಳೆಯ ಮಾತಿನಿಂದ ತಪ್ಪಿಸಿಕೊಳ್ಳಲು ಯತ್ನಿಸಿರಿ. ಕುಟುಂಬದಲ್ಲಿ ವ್ಯಯವೇ ಹೆಚ್ಚಬಹುದು. ಆದರೆ ಸುಖವುಂಟು. ನಿಮ್ಮ ಕೈ ಎಲ್ಲ ಬಗೆಯಲ್ಲೂ ಮೇಲಾಗಿರುವುದು.

ಬರ್ಮನ್ ಅಧಿಕಾರಿಗಳು ಹಿಟ್ಲರಿಗೆ 7 ದಿವಸ ಅವಧಿ ಕೊಟ್ಟು ಇಷ್ಟರಲಿ ಶರಣಾಗತನಾಗು ಮತ್ತು ಗೌರವದಿಂದ ಆತ್ಮಹತ್ಯ ಮಾಡಿಕೋ ಎಂದು ಹೇಳಿರುವರಂತೆ. ಹಿಟ್ಲರಿಗೆ ದೇವರದಯ ತನ್ನ ಮೇಲೆ ಇನ್ನೂ ಇರುವುದೆಂದೂ ಯುದ್ಧದಲ್ಲಿ ಗೆಲ್ಲುವೆನೆಂದೂ ಭರವಸೆ ಇರುವುದೆಂದು ಇವರೇ ಹೇಳುತ್ತಾರೆ.

ಇದೇ ರೀತಿ ಯುದ್ಧವು ಮುಂದುವರಿಯುತ್ತಿದ್ದರೆ, ಅಮೇರಿಕಾದಲ್ಲಿ ಮುಂದಿನ ಚಳಿಗಾಲಕ್ಕೆ 10 ಮಿಲಿಯನ್ ಟನ್ ಕಲ್ಲಿದ್ದಲು ಖೋತವಾಗುವುದು. ಇದಕ್ಕಾಗಿ ಮನೆ ಕೆಲಸಗಳಿಗೆ ಶೇಕಡಾ 20 ರಷ್ಟು ಖೋತಾ ಮಾಡುವರು.

ಹಿಟ್ಲರಿಗೂ, ಗೋರಿಂಗಿಗೂ ವಿರುಸು ಮಾತುಗಳಾಗಿ, ಗೋರಿಂಗ್ ಪ್ರಾಣ ತ್ಯಾಗ ಮಾಡಿಕೊಂಡನೆಂದೂ, ಕೆಸರ್‌ಲಿಂಗನ್ನು ದಸ್ತಗಿರಿ ಮಾಡಬೇಕೆಂದು ಹಿಟ್ಲರಿನ ಆಜ್ಞೆಯಾಗಿದೆಯೆಂದೂ ಲಂಡನ್‌ನಿಂದ ವಾರ್ತೆ ಬಂದಿದೆ.

ಹಿಮ್ಲರು ತನ್ನ ಆಪ್ತರನ್ನು ತಟಸ್ಥ್ಯ ರಾಜ್ಯಗಳಿಗೆ ಕಳುಹಿಸುತ್ತಿರುವನ್ನು ಜರ್ಮನ್ ಆಪ್ತರು ಭೂಮಿಯೊಳಗೆ ಸೇರಿಕೊಂಡು ಮುಂದಿನ ಯುದ್ಧಕ್ಕೆ ಅಣಿಮಾಡಿಕೊಳ್ಳುತ್ತಿರುವರೆಂದು ಹೇಳಲಾಗಿದೆ.

ಜರ್ಮನಿಯಲ್ಲಿ ರಷ್ಯನ್ ಸೇನೆ, ಬ್ರಿಟನ್ ಅಮೇರಿಕಾ ಸೇನೆಗಳ ಟ್ಯಾಂಕ್ ಪಡೆಗಳು ಒಟ್ಟಿಗೆ 3 ದಿವಸದಲ್ಲಿ ಕೂಡುವ ಸಂಭವವಿದೆ.

ಈ ಬೇಸಿಗೆಯಲ್ಲಿ ಭಾರತದ 16 ರಾಜರು ಲಂಡನ್ನಿಗೆ ಬರುವವರಾಗಿರುವರಂತೆ. ಅವರೆಲ್ಲರೂ ಶಾಂತಿ ಉತ್ಸವದಲ್ಲಿ ಭಾಗಿಗಳಾಗಲು ಜೂನ್‌ನಲ್ಲಿ ಬರುವವರಾಗಿರುವರೆಂದು ಅಂಡರ್ ಪತ್ರಿಕೆಯು ತಿಳಿಸುತ್ತದೆ.

ಜನರಲ್ ಸ್ಮಟ್ಸರು ಇಂಗ್ಲೆಂಡಿಗೆ ವಿಮಾನದಲ್ಲಿ ಬರುತ್ತಿರುವಾಗ ವಿಮಾನಕ್ಕೆ ಮಿಂಚು ಹೊಡೆಯಿತು. ದೈವವಶಾತ್ ಇವರಿಗೆ ಏನೂ ಅಪಾಯವಾಗಲಿಲ್ಲ.

ಸಿಡ್ನಿಲೆಂಡಿನ ಅಧಿಕೃತ ವರದಿಯಂತೆ ಮುಸಲೋನಿಗೆ ಅಲ್ಲಿ ಆಶ್ರಯವನ್ನು ಕೊಡುವುದಿಲ್ಲವಂತೆ.

ಮೈಸೂರು ಸಂಸ್ಥಾನದ ವಿದ್ಯಾರ್ಥಿಗಳ ಸಮ್ಮೇಳನವು ರಾಜಧಾನಿಯಲ್ಲಿ ಜುಲೈನಲ್ಲಿ ನಡೆಯುವುದೆಂದೂ, ಕಾಂಗ್ರೆಸ್ ಅಧ್ಯಕ್ಷರೇ ಇದರ ಅಧ್ಯಕ್ಷರೆಂದೂ ಪ್ರೊ. ರಂಗಾ ಮತ್ತು ಜೋಚಿನ್ ಅಲ್ವ (ಫೋರಂ) ರವರು ಸಮ್ಮೇಳನಕ್ಕೆ ಬರುವರಾಗಿರುವರೆಂದೂ ತಿಳಿಯಬಂದಿದೆ.

ಜರ್ಮನಿಯು ಸೋಲುವುದಕ್ಕೆ ಮುಂಚೆ ಜಪಾನು ಚೀನಾದೊಂದಿಗೆ ಶಾಂತಿ ಮಾಡಿಕೊಳ್ಳಲು ಜರ್ವಾ ಪ್ರಯತ್ನಿಸುತ್ತಿರುವುದೆಂದು ವಾರ್ತೆ ಬಂದಿದೆ.

ಹಿಟ್ಲರು ರಿಬ್ಬನ್‌ಟ್ರಾಪ್ ಮೂಲಕ ತನ್ನ ಕಡೆಯ ಶಾಂತಿ ಶರತ್ತುಗಳನ್ನು ಬ್ರಿಟನ್ನಿಗೆ ತಿಳಿಸಲು ಹೇಳಿರುವುದಾಗಿ ಹೇಳಿರುವನಂತೆ. ತನ್ನ ಸರ್ವಾಧಿಕಾರತ್ವವನ್ನು ಬಿಡುವನಂತೆ. ರಷ್ಯನರ ಮೇಲೆ ಮಾತ್ರ ಯುದ್ಧ ಪಡೆಸುವುದಾಗಿಯೂ ಬ್ರಿಟ್, ಅಮೇರಿಕಾಗಳ ಮೇಲೆ ಯುದ್ಧ ನಿಲ್ಲಿಸುವುದಾಗಿಯೂ ತಿಳಿಸಿರುವನಂತೆ.

ತಿಂಗಳಿಗೆ ರೂ. 750 ಸಂಬಳದ ಮೇಲೆ 50 ಮಂದಿ ಗುಮಾಸ್ತರನ್ನು ಬ್ರಿಟನ್ನಿನಿಂದ ಭಾರತ ಸರಕಾರವು ಆಮದು ಮಾಡಲಿರುವುದು.

ಏಪ್ರಿಲ್ 1 ರಲ್ಲಿ ರಷ್ಯನರು ಡ್ಯಾನ್‌ಜಿಗ್ ಹಿಡಿದಾಗ ಜರ್ಮನರ 45 ಸಬ್‌ಮೆರಿನ್, 151 ಹಡಗುಗಳು, ಹೇರಳ ಸಾಮಾಗ್ರಿಗಳು ದೊರೆತವು.

ಮೂವರು ಅಮೇರಿಕ ಸಿಪಾಯಿಗಳು, ಕಲ್ಕತ್ತಾದಲ್ಲಿ ಮೋಟಾರಿನಲ್ಲಿ ಹೋಗುತ್ತಿದ್ದ ಮೂವರು ಸ್ನೇಯರನ್ನು ಗಾಡಿಯಿಂದ ಕೆಳಕ್ಕೆ ಎಳೆದು ಮೂಗನಭಂಗ ಮಾಡಿ ಬೀದಿಯಲ್ಲಿ ಎಸೆದರೆಂದು ಕೇಂದ್ರ ಸಭೆಯಲ್ಲಿ ಕೇಳಿದ ಪ್ರಶ್ನೆಗೆ ತನಗೆ ಆ ವಿಷಯವೇ ಗೊತ್ತಿಲ್ಲವೆಂದು ಸರ್ಕಾರಿ ಉತ್ತರವಾಯಿತು.

ಕೆಂಪು ಬಲ್ಗೇರಿಯಾ ಸೇನೆ ತುರ್ಕಿ ಗಡಿಗೆ ಬಂದಿದೆ!

ಹೊಗೆಯಿಂದ ಬಂಗಾರ

ಧೂಮಪಾನ ಮಾಡುವುದರಿಂದ ನೇತ್ರ ದೃಷ್ಟಿ ಮಂದವಾಗವುದೆಂದೂ, ಮೂಗಿನ ಅನೇಕ ರೋಗಗಳು ಉತ್ಪನ್ನವಾಗುವುದೆಂದೂ, ಬುದ್ಧಿಭ್ರಮಣೆಯಾಗುವುದೆಂದೂ, ಶ್ವಾಸಕೋಶಗಳು ಕೆಡುವುದೆಂದೂ, ದೇಹವೇ ಸುಡಲ್ಪಡುವುದೆಂದೂ ಇಂಗ್ಲೆಂಡಿನ ಜೇಮ್ಸ್ ರಾಜನ ಅಭಿಪ್ರಾಯವಾಗಿತ್ತು.

ರೋಮನಲ್ಲಿ ತಂಬಾಕನ್ನು ನಶ್ಯಕ್ಕಾಗಿ ಹೆಚ್ಚಾಗಿ ಉಪಯೋಗಿಸುವರು. ಚರ್ಚಿನಲ್ಲಿ ಯಾರಾದರೂ ತಂಬಾಕನ್ನು ತಂದರೆ ಅವರನ್ನು ಬಹಿಷ್ಕರಿಸುವುದಾಗಿ ಪೋಪರು ಹಿಂದೆ ಹೆದರಿಸಿದ್ದರು.

ಪರ್ಷಿಯಾದಲ್ಲಿ ಯಾವ ಅಂಗಡಿಯವನು ತಂಬಾಕನ್ನು ಮಾರಿದನೋ ಅವನ ಬಾಯಿಗೆ ಸೀಸವನ್ನು ಕಾಯಿಸಿ ಹಾಕುತ್ತಿದ್ದರು.

ತುರ್ಕಿಯಲ್ಲಿ ಯಾರು ತಂಬಾಕು ಸೇವಿಸುತ್ತಿದ್ದರೋ ಅಂಥವರನ್ನು ಅವರ ಗುಡಿಗುಡಿಯನ್ನು ಮೂಗಿಗೆ ತುರುಕಿಗಲ್ಲಿಗೇರಿಸುತ್ತಿದ್ದರು.

ಸ್ಪೇನಿನಲ್ಲಿ ನಾವಿಕರು ಹೊಗೆಬತ್ತಿ ಸೇದಿ ತಮ್ಮ ಬಾಯಲ್ಲೂ ಮೂಗಿನಲ್ಲೂ ಹೊಗೆ ಬಿಡುತ್ತಿದ್ದರೆ, ಅವರ ದೇಹದಲ್ಲಿ ದೆವ್ವ ಸೇರಿಕೊಂಡಿದೆಯೆಂದು ಅವರನ್ನು ಬಂದೀಖಾನೆಗೆ ಹಾಕುತ್ತಿದ್ದರು.

ಇಂಗ್ಲೆಂಡಿನಲ್ಲಿ ಸರ್ ವಾಲ್ಟರ್ ರ್ಯಾಲೆ ಕಾಲದಲ್ಲಿ ಹೊಗೆ ಬತ್ತಿ ಸೇದುವ ಅಭ್ಯಾಸ ಬಂತು. ಒಂದು ದಿವಸ ರ್ಯಾಲೆಯು ರಾಣಿಯು ಬಳಿಗೆ ಹೋಗಿ ತಾನು ಹೊಗೆಯ ತೂಕ ಎಷ್ಟೆಂದು ಹೇಳಬಲ್ಲೆನೆಂದನು. ಹೊಗೆಯ ತೂಕ ಎಷ್ಟೆಂದು ಹೇಳಿದರೆ, ಅದರ ತೂಕ ಭಂಗಾರ ಕೊಡುವುದಾಗಿ ರಾಣಿಯು ಹೇಳಿದಳು. ರ್ಯಾಲೆಯು ಒಂದು ಕಟ್ಟು ಚುಟ್ಟಾ ಸೇದಿ ಬೂದಿಯನ್ನು ತೂಕಾಪಮಾಡಿ ಅವು ವೆತ್ಯಾಸವು ಹೊಗೆಯ ತೂಕವೆಂದನು. ರಾಣಿಯು ಬಹುಮಾನ ಮಾಡಿ ಎಲ್ಲರೂ ಭಂಗಾರವೆನ್ನು ಹೊಗೆ ಮಾಡುವರು, ನೀನು ಹೊಗೆಯನ್ನು ಭಂಗಾರ ಮಾಡಿದೆ ಎಂದಳು.

ಶ್ರೇಷ್ಠ ತರಹದ ವಾಸಸ್ಥಾನ

ದ. ಆಫ್ರಿಕಾದಲ್ಲಿ ಗಾಜಿನ ಇಟ್ಟಿಗೆಗಳನ್ನು ತಯಾರುಮಾಡಿ ಅದಂದ ಮನೆಗಳನ್ನು ತಯಾರುಮಾಡುತ್ತಿರುವರು. ಈ ಮನೆಗಳಲ್ಲಿ ವಾಸಮಾಡಿದರೆ ಬೇಸಿಗೆಯಲ್ಲಿ ತಂಪಾಗಿಯೂ ಚಳಿಗಾಲದಲ್ಲಿ ಬೆಚ್ಚಗೂ ಇರಲು ಅನುಕೂಲವಾಗಿದೆ.

ವಿವಿಧ ವಿಷಯ

ಮುಂದೆ ಪ್ರಪಂಚದ ಅಂರ್ತಾಷ್ಟ್ರೀಯ ನ್ಯಾಯಸ್ಥಾಪನೆಯನ್ನು ಸ್ಥಾಪಿಸುವ ವಿಷಯವು ಸ್ಯಾನ್‌ಫ್ರಾನ್ಸಿಸ್ಕೋದಲ್ಲಿ ಚರ್ಚೆಯಾಗುವುದು. ಇದಕ್ಕಾಗಿ ಬ್ರಿಟ್ಟ, ರಷ್ಯಾ, ಚೈನಾಗಳ ನ್ಯಾಯಶಾಸ್ತ್ರಜ್ಞರು 9-4-45 ರಲ್ಲಿ ವಾಷಿಂಗ್ಟನ್ನಿನಲ್ಲಿ ಅಮೇರಿಕಾದ ನ್ಯಾಯಶಾಸ್ತ್ರಜ್ಞರ ಸಂಗಡ ಸೇರಿ ಚರ್ಚಿಸುವರು.

ಂ ಂ

ಪಂಜಾಬ್ ವಿಶ್ವವಿದ್ಯಾನಿಲಯದ ಕಾಲೇಜುಗಳಲ್ಲಿ ಯೋಗಸಾಧನೆ ಮಾಡಲು ಸರ್ಕಾರದವರು ಅನುಮತಿ ಕೊಟ್ಟಿದಾರೆ.

ಂ ಂ

ಇದುವರೆಗೆ ಮಿಲಿಟರಿಯವರಿಗಾಗಿ ಭಾರತದಲ್ಲಿ 859220 ದನಗಳನ್ನೂ, 20 ಲಕ್ಷ ರೂ. ಬೆಲೆ ಬಾಳುವ ಕೋಳಿಗಳನ್ನೂ ಕೊಲೆ ಮಾಡಿರುವುದಾಗಿ ಸರ್ಕಾರಿಯಾಗಿ ಹೇಳಲಾಗಿದೆ.

ಂ ಂ

ಲೆಂಡ್‌ಲೀಸ್ ಮೇರೆ ಅಮೇರಿಕಾದಿಂದ 30 ಸಾವಿರ ಕಟ್ಟಿಡ ಬಂಗಲೆಗಳು ಬ್ರಿಟನ್ನಿಗೆ ಬಂದಿರುತ್ತವೆ. ಇದರಿಂದ ಬ್ರಿಟನ್ನಿನಲ್ಲಿ ಮನೆಗಳ ಅಭಾವ ಸ್ವಲ್ಪ ಕಮ್ಮಿಯಾಗುವುದು.

ಂ ಂ

ಸ್ವರಾಜ್ಯ ಬಾವುಟವನ್ನು ಹಾರಿಸಿದ್ದರಿಂದ ಅನೇಕರಿಗೆ ಬೆಜವಾಡದಲ್ಲಿ 6 ತಿಂಗಳು ಕಠಿಣ ಸಜವಾಯಿತು.

ಂ ಂ

ಮದರಾಸಿನ ಆನಂದವಿಕಟ್ಟ ಪತ್ರಿಕೆ ಮಾಲೀಕರು ತಮ್ಮ ದೀಪಾವಳಿ ಸಂಚಿಕೆಗೆ ನ್ಯೂಸ್‌ಪ್ರಿಂಟ್ ಅಲ್ಲದ ಬೇರೆ ಕಾಗದವನ್ನು ಉಪಯೋಗಿಸಿದರೆಂದು ರೂ. 50 ಜುಲ್ಮಾನೆಯಾಯಿತು.

ಂ ಂ

ಜರ್ಮನಿಯಲ್ಲಿ ಇನ್ನು ಯುದ್ಧಕ್ಕೆ ತಯಾರಿರುವವರು 20 ಮಿಲಿಯನ್ ಜನರು ಮಾತ್ರವೆಂದು ಗೊತ್ತಾಗಿದೆ.

ಂ ಂ

ಅಮೇರಿಕ 9 ನೇ ಸೇನೆಯು ಪ್ರತಿದಿವಸವೂ 294000 ಗ್ಯಾಲನ್ ಪೆಟ್ರೋಲನ್ನು ಉಪಯೋಗಿಸುವುದು.

ಂ ಂ

ರೊಮೇನಿಯಾದ ವಶದಲ್ಲಿದ್ದ 26 ಸಾವಿರ ಟನ್ ಮೆಷನರಿ ಸಾಮಾನು ರಷ್ಯಕ್ಕೆ ಸಾಗಿಸಲಾಗಿದೆ.

ಮದರಾಸಿನ ಆಡಿಟ್ ಆಫೀಸಿನಲ್ಲಿ ಸ್ತ್ರೀಯರು ಕೆಲಸ ಮಾಡಲು ಅನುಮತಿ ದೊರೆಯಿತು.

ಂ ಂ

ಆಸ್ಟ್ರೇಲಿಯಾದಲ್ಲಿ ಬಟ್ಟೆ ರೇಷನಿಂಗು ಜಾರಿಗೆ ಬಂದಿದೆ. 1800000000 ಕೂಪನ್‌ಗಳನ್ನು ಕೊಡಲಾಗಿದೆ.

ಂ ಂ

ಹುಬ್ಬಳ್ಳಿಯಲ್ಲಿ ಮಕ್ಕಳನ್ನು ಪಾಠಶಾಲೆಗೆ ಕಳುಹಿಸಲಿಲ್ಲವೆಂದು 12 ಮಂದಿ ತಂದೆಯವರಿಗೆ ತಲಾ ಕೂ 1 ಠಂತೆ ಜುಲ್ಮಾನೆಯಾಯಿತು- ಅವರಲ್ಲಿ ಬಬ್ಬನಿಗೆ 3 ವಾರ ಸಜಾ ಶಿಕ್ಷೆಯಾಯಿತು.

ಂ ಂ

ಬೆಜವಾಡದಲ್ಲಿ ನಾಲ್ಕು ಪೋಲೀಸ್ ಕಾನ್ಸ್‌ಟಬಲ್‌ಗಳು ಹದಿನೈದು ಕೂಪಾಯಿಗಳನ್ನು ಒಬ್ಬನಿಂದ ಕದ್ದರೆಂದು, ಕೆಲಸದಿಂದ ವಜಾಮಾಡಲ್ಪಟ್ಟರು.

ಂ ಂ

ಕೋಲಾರದ ಚಿನ್ನದ ಗಣಿಯವರು ಮೈಸೂರು ಸರಕಾರದವರು 40 ಲಕ್ಷ ರೂ. ಧನ ಸಹಾಯಮಾಡದಿದ್ದರೆ ತಾವು ಕೆಲಸ ನಿಲ್ಲಿಸುವುದಾಗಿ ಬೆದರಿಸಿರುತ್ತಾರೆ.

ಂ ಂ

ಭಾರತದಲ್ಲಿ 10--12 ಲಕ್ಷ ಟನ್ ಸಕ್ಕರೆ ತಯಾರಾಗುತ್ತಿದ್ದರೂ ಎಷ್ಟೋ ಕಡೆ ಕಾಫಿಗೆ ಸರಿಯಾಗಿ ಸಕ್ಕರೆ ಇಲ್ಲ ವಲ್ಲಾ ಎಂದು ಗೊಣಗುಟ್ಟುತ್ತಿರುವರು

ರೂರ್ ಕೃತಕ ಪಟ್ಟಣ

ರೂರ್ ಕಣಿವೆಯಲ್ಲಿ ಮಿತ್ರ ವೈನೂನಿಕರನ್ನು ವಂಚಿಸಲು ಜರ್ಮನರು ವಾಸ್ತವಿಕವಲ್ಲದ ಪಟ್ಟಣಗಳನ್ನು ಅಲ್ಲಲ್ಲೆ ಕಟ್ಟಿದ್ದರು. ಈ ಕೆಲಸವನ್ನು 1942 ರಿಂದ ಪ್ರಾರಂಭಿಸಿ, ಈ ವಿಲಕ್ಷಣ ವಕ್ರ ಕಟ್ಟಡಗಳ ಬೆಳಕು ಮೇಲಿಂದ ಭೂಮಿಯ ಮೇಲೆ ಬೀಳುವಂತೆ ಮಾಡಿ, ರಾತ್ರಿ ಕಾಲದಲ್ಲಿ ಇದೊಂದು ಪಟ್ಟಣ ಇಲ್ಲವೆ ಕಾರ್ಖಾನೆಗಳ ಸಾಲೆಂದು ತಿಳಿಯುವಹಾಗೆ ರಚಿಸಿದ್ದರು. ಮನೆಗಳ ಮೇಲೆ ಹತ್ತು ಅಡಿ ಉದ್ದದ ಮರದಿಂದ ಮಾಡಿದ ಚಿಮ್ಮಿಗಳು ಸಾಲು ಸಾಲಾಗಿದ್ದವು- ಇವುಗಳಿಂದ ಹೊಗೆಯನ್ನು ಹೊರಡಿಸುತ್ತಿದ್ದರು. ಭೂಮಿಯ ಮೇಲೆ ಬೆಳಕಿರುತ್ತಿದ್ದಿತು. ಬ್ರಿಟಿಷ್ ವೈನೂನಿಕರು ಈ ಜಪಾನರ ಮೋಸಕ್ಕೆ ಒಳಗಾಗುವರೇ ? ನೂರಾರು ಸರ್ಚ್ ಲೈಟ್‌ಗಳ ಸಹಾಯದಿಂದ ಈ ಕೃತ್ರಿಮ ಪೈಶಾಚ ಪಟ್ಟಣಗಳನ್ನು ಪತ್ತೆ ಮಾಡುತ್ತಾ, ನಿಜವಾದ ರೂರ್ ಪ್ರಾಂತ್ಯದ ಪಟ್ಟಣಗಳನ್ನು ನಾಶಮಾಡಿದರು.

ಹಿಟ್ಲರು ಜರ್ಮನಿಯಲ್ಲಿರುವ ಒಂದು ಕಾಲಿನವರನ್ನೂ ಬಿಟ್ಟಿಲ್ಲ. ಇವರನ್ನು ಟ್ಯಾಂಕುಗಳಲ್ಲಿ ಕೂರಿಸಿ ಟ್ಯಾಂಕ್ ನಡೆಸುವ ಕೆಲಸ ತೆಗೆದುಕೊಳ್ಳುತ್ತಿದಾನೆ. ಈಗ ಕೈಸೆರೆಯಾಗಿರುವ ಒಂಟಿ ಕಾಲಿನವರಿಂದ ಈ ವಿಷಯ ಹೊರಪಟ್ಟಿತು.

ಆರೋಗ್ಯ ಸೌಖ್ಯ ನಮ್ಮ ಜನ್ಮ ಹಕ್ಕು

— ಪ್ರತಿ ಊಟವನ್ನು ಔತಣದಂತೆ ಮಾಡಿಕೊಳ್ಳಿರಿ —



ನಿಮಗೆ ಆರೋಗ್ಯಕರವಾದ, ಸಂತಸದಾಯಕವಾದ ಊಟ, ರುಚಿಕರವಾದ ಉಪ್ಪಿನಕಾಯಿ, ಸಾರು, ಹುಳಿ, ವ್ಯಂಜನ ಬೇಕಾದರೆ ಟಿ.ಜಿ. ಹಿಂಗನ್ನು ಸ್ವಲ್ಪಹಾಕಿ. ಆಗ ನೋಡಿ ಅದರ ಗುಣ. ಒಂದು ದಿವಸ ಉಪಯೋಗಿಸಿದರೆ ಆಮೇಲೆ ಟಿ.ಜಿ. ಹಿಂಗನ್ನು ಪ್ರತಿದಿನವೂ ಉಪಯೋಗಿಸುತ್ತೀರಿ.

1 ಪೌಂಡ್, ಅರ್ಧ ಪೌಂಡ್, ಕಾಲು ಪೌಂಡ್ ಮತ್ತು 1 ಪಲಂಗಳಲ್ಲಿ ಎಲ್ಲಾ ವ್ಯಾಪಾರಗಾರರಲ್ಲೂ ಮತ್ತು ಈ ಕೆಳಗಿನ ವಿಳಾಸದಾರರಲ್ಲೂ ದೊರೆಯುವುದು.

ವಲ್ಲಭದಾಸ ತೇಜಪಾಲ್,

ಹಿಂಗು, ಕಸ್ತೂರಿ, ಕೇಸರಿ ವ್ಯಾಪಾರಗಾರರು,

14 ಗೋವಿಂದಪ್ಪ ನಾಯಕ್ ಬೀದಿ. ಜಿ.ಟಿ. ಮದರಾಸ್.

ತ್ರಿಮೂರ್ತಿಗಳಲ್ಲಿ ತಿಕ್ಕಾಟವೇ

ತ್ರಿಮೂರ್ತಿಗಳಲ್ಲಿ ಪೋಲೆಂಡ್ ವಿಷಯದಲ್ಲಿ ತಕ್ಕಮಟ್ಟಿಗೆ ಅಪಾಯಕರವಾದ ತಿಕ್ಕಾಟ ಪ್ರಾರಂಭವಾಗಿದೆ. ಸ್ಟ್ಯಾಲಿನ್‌ಫ್ರಾನ್ಸಿಸ್ಕೋ ಪ್ರಪಂಚ ಶಾಂತಿ ರಕ್ಷಣಾ ಸಮ್ಮೇಳನಕ್ಕೆ ಧಕ್ಕೆ ತಟ್ಟುವಂತಿದೆ. ಲುಬ್ಲಿನ್ ಪೋಲರನ್ನು ಸಮ್ಮೇಳನಕ್ಕೆ ಕಳೆಯಬೇಕೆಂದು ರಷ್ಯಾ ಒತ್ತಾಯ ಪಡಿಸುತ್ತಿರುವುದೂ, ಬ್ರಿಟನ್ ಅಮೇರಿಕಾ ನಿರಾಕರಿಸುತ್ತಿರುವುದೂ ಅಂತಃಕಲಹಕ್ಕೆ ಕಾರಣವು.

o o o o

ಹಿಟ್ಲರ್ ಗಡ್ಡವನ್ನು ಬೆಳಸುತ್ತಿರುವನಂತೆ !

AT OPERA — From 7-4-45

Air Raid Wardens

With Stan Laurel & Oliver Hardy

12-4-45 ರಿಂದ

‘ ಪೊಂಪಾವೆ ’

ಪಾತ್ರ - ರಾಮುಸ್ವಾಮಿ, ಜೀವರತ್ನಂ, ಮಧುರಂ, ಕೃಷ್ಣ್

ಗ್ಲೂ ಕೋ ನೇ ಟ್ - ಡಿ.

.... ಬಿಲ್ಲೆಗಳು ....

ಕ್ಯಾಲ್ಸಿಯಂ ಗ್ಲೂಕೋನೇಟ್
ಮತ್ತು ವಿಟಮಿನ್ ಡಿ. ಮಿಶ್ರಿತವಾಗಿದ್ದು
ಚಾಕೊಲೆಟ್‌ನಂತೆ ರುಚಿಕರವಾಗಿದೆ.

ಕ್ಯಾಲ್ಸಿಯಂ ಅಭಾವದ ಎಲ್ಲಾ ಪರಿಸ್ಥಿತಿಗೂ
ಬಸಿರುತನ ಮತ್ತು ಮೆಕ್ಕಳು ಸ್ತನಪಾನಮಾಡುವ ಅವಧಿಗೂ,
ಮಕ್ಕಳ ಎಲುಬುಗಳು ಸದೃಢವಾಗಲೂ ಇದನ್ನು
ಶಿಫಾರಸು ಮಾಡಲಾಗಿದೆ.

ಐ. ಟಿ. ಎಲ್. ತಯಾರಿಕೆ

ಗೌರ್ಮೆಂಟ್ ಇಂಡಸ್ಟ್ರಿಯಲ್ ಅಂಡ್ ಟೆಸ್ಟಿಂಗ್
ಲೆಬೊರೇಟರಿ

ಪೋ. ಆ. ಮಲ್ಲೇಶ್ವರಂ — ಬೆಂಗಳೂರು

ಶುದ್ಧವಾದುದೆಂದು ಗ್ಯಾರಂಟಿ. ಯಾವ ಅಪರಿಶುದ್ಧವಾದ ಪದಾರ್ಥ ಮಿಶ್ರವಾಗಿಲ್ಲ. ದೇವಸ್ಥಾನಗಳಲ್ಲೂ, ಪೂಜಾಕಾರ್ಯಕ್ಕೂ, ಔಷಧಗಳಿಗೂ, ಆಹಾರಗಳಿಗೂ, ಶುಭ ಸಂತೋಷ ಕಾರ್ಯಗಳಲ್ಲಿಯೂ ಉಪಯೋಗಿಸಲರ್ಹವಾಗಿದೆ.

.... ಶ್ರೀ ಓಂ ಬ್ರಾಂಡ್ ಕೇಸರಿ ....

ಕೇಸರಿಯನ್ನು ಗಿರಾಕಿಗಳ ಅನುಕೂಲಕ್ಕಾಗಿ 1 ತೊಲ, 5 ತೊಲ, 1 ಪೌಂಡ ಅಥವ ಹೆಚ್ಚಾಗಿ ಬಿಕರಿಗೆ ಇಡಲಾಗಿದೆ,

ಸಾವರ್ಕ್ ಬ್ರಾಂಡ್

ಓಂ ಬ್ರಾಂಡ್ ಕೇಸರಿಯ ಪುಡಿಯನ್ನು ಕಾಲು ತೊಲ, ಅರ್ಧ ತೊಲ, ಒಂದು ತೊಲ, ಐದು ತೊಲ ಮತ್ತು ಒಂದು ಪೌಂಡುಗಳಲ್ಲಿ ಬಿಕರಿಗೆ ಏರ್ಪಾಡಾಗಿದೆ

ಅಲ್ಲದೆ ಪುಡಿ ಮತ್ತು ಮಿಶ್ರ ಕೇಸರಿಯನ್ನು 16|1 ತೊಲ, 8|1 ತೊಲ, 4|1 ತೊಲ, ಅರ್ಧ ತೊಲ, ಒಂದು ತೊಲ ಐದು ತೊಲ ಮತ್ತು ಚಿಲ್ಲರೆಯಾಗಿಯೂ ಬಿಕರಿಗೆ ಇಟ್ಟಿದೆ. ಇವು ಹೊಟಲ್ ಉಪಯೋಗಕ್ಕೆ ಉಪಯುಕ್ತವಾದುದ್ದು. ಒಂದು ಸಲ ಉಪಯೋಗಿಸಿದರೆ ನಮ್ಮ ಕೇಸರಿಯ ಮಹತ್ವ ತಿಳಿಯುವುದು.

ಎಲ್ಲಾ ವರ್ತಕರು ಈ ಕೇಸರಿಯನ್ನು ಮೂರುವರು- ಮತ್ತು, —

ವಲ್ಲಭದಾಸ್ ತೇಜ್ ಪಾಲ್ ಹಿಂಗು, ಕೇಸರಿ, ಪಚ ್ಚಕರ್ಪೂರ ವರ್ತಕರು
14. ಗೋವಿಂದಪ್ಪ ನಾಯಿಕ' ಬೀದಿ ಜಿ.ಟಿ. ಮದರಾಸ್.

At Ranjit

Pagli Duniya

ರಣಜಿತ್ ಟಾಕೀಸಿನಲ್ಲಿ
4 ನೇ ಅಮೋಘ ವಾರ

ಪಗಲಿ ದುನಿಯಾ
(ಹಿಂದಿ)

ನುಮ್ತಾಜ್ ಶಾಂತಿ ಮೋತಿಲಾಲ್
ಷೇಕ್‌ಮುಕ್ತಾರ್ ಪಾತ್ರವಹಿಸಿರುವರು



ಐ.ಜೆ. ಹಾಲ್, ಸರಾಫ್ ಅಂಗಡಿ
ರವೇ ಬೀದಿ, ಮೈಸೂರು.

Edited, Printed and published by M. S. Krishna Rao, at the Satvavadi Press, Chamaraja Agrahar, Mysore

For Good Printing—

L. N. Press

Srirampet MYSORE

ರಕ್ತವೃದ್ಧಿಗೆ — ಧಾತುಪುಷ್ಟಿಗೆ

ಶಕ್ತಿಸುಧಾ

ಸೇವನೆಯೇ ಸುಲಭೋಪಾಯ

ಶಕ್ತಿಸುಧಾ, ೧೦೬೭ ಚಾಮರಾಜಪುರಂ ಮೈಸೂರು